೨-೭೨ (180)

## ಕರ್ನಾಟಕ ವಿಧಾನ ಪರಿಷತ್

### 143ನೇ ಮುಂದುವರೆದ ಅಧಿವೇಶನ-2021

| | |
|---|---|
| ಸೂಚನೆ ನೀಡಿದ ಸದಸ್ಯರ ಹೆಸರು | ಶ್ರೀ ನಸೀರ್ ಅಹ್ಮದ್,<br>ವಿಧಾನ ಪರಿಷತ್ತಿನ ಮಾನ್ಯ ಸದಸ್ಯರು |

### ವಿಷಯ

ಬೆಂಗಳೂರು ವಿಶ್ವವಿದ್ಯಾಲಯದಿಂದ ಪ್ರತಿ ವರ್ಷ ತೇರ್ಗಡೆ ಹೊಂದಿದ (ಬಿ.ಎ., ಬಿ.ಕಾಂ. ಬಿ.ಎಸ್ಸಿ) ಪದವಿ ವಿದ್ಯಾರ್ಥಿಗಳಿಗೆ ಆಯಾಯ ವರ್ಷಗಳಲ್ಲಿಯೇ Annual Convocation Certificate ಗಳನ್ನು ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದ್ದು, ಆದರೆ, 55ನೇ Mini Annual Convocation ನಲ್ಲಿ ಅರ್ಜಿ ಹಾಕಿದ್ದ ಪದವಿ ವಿದ್ಯಾರ್ಥಿಗಳಿಗೆ ಇದುವರೆವಿಗೂ Annual Convocation Certificate ನೀಡಿರುವುದಿಲ್ಲ. ಈ ಬಗ್ಗೆ ವಿಶ್ವವಿದ್ಯಾಲಯದಲ್ಲಿ/ಕಾಲೇಜಿನಲ್ಲಿ ವಿಚಾರಣೆ ಮಾಡಿದರೆ ಇನ್ನೂ ಘಟಿಕೋತ್ಸವ ಸಮಾರಂಭ ನಡೆದಿರುವುದಿಲ್ಲವೆಂದು ತಿಳಿಸಿರುತ್ತಾರೆ. ಇದರಿಂದಾಗಿ ತೇರ್ಗಡೆ ಹೊಂದಿದ ಪದವಿ ವಿದ್ಯಾರ್ಥಿಗಳಿಗೆ ಮುಂದಿನ ವಿದ್ಯಾಭ್ಯಾಸಕ್ಕೆ ಮತ್ತು ಹಳೆಯ ವಿದ್ಯಾರ್ಥಿಗಳಿಗೆ ತಮ್ಮ ಭವಿಷ್ಯ ರೂಪಿಸಿಕೊಳ್ಳಲು ತೊಂದರೆಯಾಗಿರುವ ಬಗ್ಗೆ.

### ಸೂಚನೆಯ ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ ಹೇಳಿಕೆ

ಪ್ರತಿ ವರ್ಷ ತೇರ್ಗಡೆ ಹೊಂದಿ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳನ್ನು ಪೂರೈಸುವ ವಿದ್ಯಾರ್ಥಿಗಳಿಗೆ ತೇರ್ಗಡೆ ಹೊಂದಿದ ಆಯಾ ವರ್ಷಗಳಲ್ಲಿಯೇ ಘಟಿಕೋತ್ಸವಗಳನ್ನು ನಡೆಸಿ ಪದವಿ ಪ್ರಮಾಣ ಪತ್ರಗಳನ್ನು ಬೆಂಗಳೂರು ವಿಶ್ವವಿದ್ಯಾಲಯದಿಂದ ನೀಡಲಾಗುತ್ತದೆ.

ಆದರೆ, ವಿಲಕ್ಷಣವಾದ ಕೋವಿಡ್-19 ಮಾರಕ ರೋಗದ ಪ್ರಸರಣೆಯಿಂದಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಜಾರಿಗೊಳಿಸಲಾದ ನಿರ್ಬಂಧಗಳು ಹಾಗೂ ಸುರಕ್ಷತಾ ಮಾರ್ಗಸೂಚಿಗಳ ಪರಿಪಾಲನೆಯ ಅನಿವಾರ್ಯತೆಯಿಂದಾಗಿ 55 ನೇ ವಾರ್ಷಿಕ ಘಟಿಕೋತ್ಸವವನ್ನು ಬೆಂಗಳೂರು ವಿಶ್ವವಿದ್ಯಾಲಯದಿಂದ ಏರ್ಪಡಿಸಲು ವಿಳಂಬವಾಗಿರುತ್ತದೆ. ಅದಾಗ್ಯೂ, ದಿನಾಂಕ30.01.2021ರಂದು ವಾರ್ಷಿಕ ಘಟಿಕೋತ್ಸವವನ್ನು ನಡೆಸಲಾಗಿದ್ದು, ಪದವಿ ಪ್ರಮಾಣ ಪತ್ರಗಳನ್ನು ವಿತರಿಸಲಾಗುತ್ತಿದೆ. ಮುಂದುವರೆದು, 55 ನೇ Mini Annual Convocation ಸದ್ಯದಲ್ಲಿಯೇ ನಡೆಯಲಿದ್ದು, ಏಪ್ರಿಲ್-2021ರ ನಂತರದಿಂದ ಪದವಿ ಪ್ರಮಾಣಪತ್ರಗಳನ್ನು ಸಕಾಲಿಕವಾಗಿ ಬೆಂಗಳೂರು ವಿಶ್ವವಿದ್ಯಾಲಯದಿಂದ ವಿತರಿಸಲಾಗುತ್ತದೆ.

(ಡಾ। ಅಶ್ವತ್ಥನಾರಾಯಣ ಸಿ.ಎನ್)

ಉಪಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ)

ಇಡಿ/ 52 /ಯುಬಿವಿ/2021